ಕರ್ನಾಟಕ ಸರ್ಕಾರ

ಖಜಾನೆ ಇಲಾಖೆ

ಖಜಾನೆ ನಿರ್ದೇಶಕರ ಕಾರ್ಯಾಲಯ, ಡಾ: ಅಂಬೇಡ್ಕರ್ ವೀಧಿ, ವಿ.ವಿ.ಗೋಪುರ, ಬೆಂಗಳೂರು-560001.

ಸಂ:ಖನಿ/ಸಿಬ್ಬಂದಿ(5)/ಸಿಆರ್38/2017-18 ದಿನಾಂಕ: 27.11.2017

## ಅಧಿಸೂಚನೆ

ವಿಷಯ: ಶ್ರೀಮತಿ ಬಿ.ಕೆ. ಪವಿತ್ರ & ಇತರರು ಯೂನಿಯನ್ ಆಫ್ ಇಂಡಿಯಾದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಲ್ ಅಪೀಲು ಸಂಖ್ಯೆ: 2368/2011ರಲ್ಲಿ ದಾಖಲಿಸಿರುವ ಅರ್ಜಿಯ ಪ್ರಕರಣಕ್ಕೆ ಸಂಬಂಧಿಸಿದಂತೆ, ಘನ ನ್ಯಾಯಾಲಯದ ದಿನಾಂಕ: 09.02.2017ರ ತೀರ್ಪಿನಲ್ಲಿರುವ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು, ಸಿದ್ಧಪಡಿಸಿರುವ ಖಜಾನೆ ಇಲಾಖೆಯ 'ಬಿ' ವೃಂದ, ಮತ್ತು ರಾಜ್ಯ ಮಟ್ಟದ ಮುಖ್ಯ ಲೆಕ್ಕಿಗರ ವೃಂದದ ತಾತ್ಕಾಲಿಕ ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1) ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ಸಿವಿಲ್ ಅಪೀಲು ಸಂಖ್ಯೆ: 2368/2011.Dated: 09.02.2017ರ ತೀರ್ಪು

2)ಸರ್ಕಾರದ ಆದೇಶ ಸಂಖ್ಯೆ: DPAR 182, SRR 2011 ದಿ: 06.05.2017.

3)ಈ ಕಛೇರಿಯ ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳ ಪ್ರಕಟಣೆಯ ದಿನಾಂಕ:26.10.1994, ದಿ:02.02.1996, ದಿ:21.05.2005 ಮತ್ತು ಕಾಲಕಾಲಕ್ಕೆ ಪ್ರಕಟಿಸಲಾಗಿರುವ 'ಬಿ' ಮತ್ತು ರಾಜ್ಯ ಮಟ್ಟದ ಮುಖ್ಯ ಲೆಕ್ಕಿಗರ ವೃಂದದ ಜ್ಯೇಷ್ಠತಾ ಪಟ್ಟಿಗಳು

*****

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ತೀರ್ಪು ದಿನಾಂಕ: 31.03.1992ರನ್ವಯ ಈ ಕಛೇರಿಯ ಅಧಿಸೂಚನೆ ದಿನಾಂಕ:26.10.1994, ದಿ:02.02.1996, ದಿ:21.05.2005 ರಲ್ಲಿ ಖಜಾನೆ ಇಲಾಖೆಯ ವಿವಿಧ 'ಸಿ' ವೃಂದ ಮತ್ತು ರಾಜ್ಯ ಮಟ್ಟದ ಮುಖ್ಯ ಲೆಕ್ಕಿಗರ ವೃಂದದ ದಿನಾಂಕ: 01.11.1956 ರಿಂದ ದಿನಾಂಕ: 31.12.1994 ರವರೆಗಿನ ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಕರ್ನಾಟಕ ಸಿವಿಲ್ ಸೇವಾ(ಬಡ್ತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧಗೊಳಿಸುವಿಕೆ) ನಿಯಮ 1973 ಮತ್ತು ಕರ್ನಾಟಕ ಸೇವಾ ಪರೀಕ್ಷೆಗಳ ನಿಯಮ 1976 ರನ್ವಯ ಸಿದ್ಧಪಡಿಸಿ, ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗಿತ್ತು.

ಪ್ರಸ್ತುತ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀಮತಿ ಬಿ.ಕೆ. ಪವಿತ್ರ & ಇತರರು ಯೂನಿಯನ್ ಆಫ್ ಇಂಡಿಯಾದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಲ್ ಅಪೀಲು ಸಂಖ್ಯೆ: 2368/2011 ಮತ್ತು 2369/2011ರಲ್ಲಿ ದಾಖಲಿಸಿರುವ ಅರ್ಜಿಗಳ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 09.02.2017ರಂದು ಹೊರಡಿಸಲಾದ ತೀರ್ಪಿನಲ್ಲಿ 1978 ರಿಂದ 2016 ರವರೆಗೆ ಈಗಾಗಲೇ ಅಸ್ತಿತ್ವದಲ್ಲಿದ್ದ ಮೀಸಲಾತಿ ನಿಯಮಗಳನ್ನು ಅಳವಡಿಸಿಕೊಂಡು ಕಾಲಕಾಲಕ್ಕೆ ನೀಡಲಾದ ಎಲ್ಲಾ ವೃಂದದ ಮುಂಬಡ್ತಿ ಹಾಗೂ ಜ್ಯೇಷ್ಠತಾ ಪಟ್ಟಿಗಳಲ್ಲಿನ ಬಡ್ತಿ ದಿನಾಂಕಗಳನ್ನು "Other catch-up rule" ಹಾಗೂ ಸಂಬಂಧಿಸಿದ ಸರ್ಕಾರದ ಆದೇಶಗಳನ್ವಯ ಪರಿಷ್ಕರಿಸಿ ಕ್ರಮ ಕೈಗೊಳ್ಳುವಂತೆ ದಿನಾಂಕ: 09.02.2017ರ ತೀರ್ಪಿನಲ್ಲಿ ಆದೇಶಿಸಲಾಗಿದೆ.

2....

ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹಾಗೂ ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ, ಇಲಾಖೆಯು 'ಬಿ' ಮತ್ತು ರಾಜ್ಯ ಮಟ್ಟದ ಮುಖ್ಯ ಲೆಕ್ಕಿಗರ ವೃಂದದ 1978 ರಿಂದ 2016 ರವರೆಗಿನ ಪುನರಾವಲೋಕನಾ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿ ಖಜಾನೆ ವೆಬ್‌ಸೈಟ್ **http://karnatakatreasury.gov.in/** ಹಾಗೂ ಖಜಾನೆ ಕಛೇರಿಗಳಲ್ಲಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಮಾಹಿತಿಗಾಗಿ ವಿಭಾಗವಾರು ದ್ವಿತೀಯ ದರ್ಜೆ ಸಹಾಯಕರ ವೃಂದದ ಜ್ಯೇಷ್ಠತಾ ಪಟ್ಟಿಯನ್ನು ಇದರೊಂದಿಗೆ ಪ್ರಕಟಿಸಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲಾ/ತಾಲ್ಲೂಕು ಖಜಾನೆಗಳ ಪ್ರಭಾರಾಧಿಕಾರಿಗಳು, ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಆಯಾ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು, ಬಾಧಿತರು ತಮ್ಮ ಆಕ್ಷೇಪಣೆಗಳನ್ನು ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಬಹುದಾಗಿದೆ.

ಪುನರಾವಲೋಕನಾ ಜ್ಯೇಷ್ಠತಾ ಪಟ್ಟಿಗಳನ್ನು ಖಜಾನೆ ನಿರ್ದೇಶನಾಲಯದಲ್ಲಿ ಪ್ರಸ್ತುತ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ. ಬಾಧಿತರು ತಮ್ಮ ಆಕ್ಷೇಪಣೆಗಳನ್ನು ಲಿಖಿತವಾಗಿ ಹಾಗೂ ಆಕ್ಷೇಪಣೆಯನ್ನು ಸಮರ್ಥಿಸುವ ಪೂರಕ ದಾಖಲಾತಿಗಳೊಂದಿಗೆ ಸಮುಚಿತ ಮಾರ್ಗದಲ್ಲಿ ನಿಗಧಿತ ಸಮಯದೊಳಗಾಗಿ ನೇಮಕಾತಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಅವಧಿ ಮೀರಿದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಬೆರಳಚ್ಚಿನ ದೋಷಗಳನ್ನು ಉಲ್ಲೇಖ (3)ರ ದಾಖಲೆಗಳನ್ವಯ ಪರಿಷ್ಕರಿಸಲಾಗುವುದು.

[signature] 27/11/2017

ಖಜಾನೆ ನಿರ್ದೇಶಕರು,
ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು, ಆಡಳಿತ ಮತ್ತು ಸಂಪನ್ಮೂಲ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಖಜಾನೆ-2 ಮತ್ತು ಪದನಿಮಿತ್ತ ಖಜಾನೆ ಆಯುಕ್ತರು, ಆರ್ಥಿಕ ಇಲಾಖೆ, 7ನೇ ಮಹಡಿ, ಕಾಳಿದಾಸ ಮಾರ್ಗ, ವಾಣಿಜ್ಯ ತೆರಿಗೆ ಕಛೇರಿಗಳ ಕಟ್ಟಡ, ಗಾಂಧಿನಗರ, ಬೆಂಗಳೂರು.

3) ಉಪ-ನಿರ್ದೇಶಕರು ಖಜಾನೆ ನಗರ ಜಿಲ್ಲೆ ಬೆಂಗಳೂರು - ರವರಿಗೆ ([illegible]) [illegible] ಪ್ರಕಟಿಸಲು.

Government of Karnataka
Department of Treasuries
Office of the Directorate of Treasuries, Dr. B.R. AmbedkarVeedi, V.V. Tower, Bangalore.

No. Try.Est(5)/CR38/2017-18 Dated: 27.11.2017

## OFFICIAL MEMORANDUM

**Sub:** Publishing the Division Wise Provisional Review cum Gradation list of various cadres of **'B' Group, Statewide Head Accountant and Second Division Assistant (Division Wise)** of the establishment of Directorate of Treasuries in view of the directions of the Hon'ble Supreme Court of India in its judgment Dt: 09.02.2017 in Civil Appeal No.2368/2011 (B.K. Pavitra and Others V/S Union of India.) Period from Dt: 27-4-1978 to Dt: 31-12-2016.

**Ref:**
1) Judgment of Hon'ble Supreme Court of India in Civil Appeal No. 2368/2011.Dated: 09.02.2017.
2) Government Order NO: DPAR 182, SRR 2011 Dt: 06.05.2017.
3) This office Review-cum-gradation list O.M. Dated: 26.10.1994, Dt: 02.02.1996, Dt: 21.05.2005, and Seniority Lists published time to Time.

*****

As per the Judgment Dt: 31.03.1992 of Karnataka Administrative Tribunal, the Department had prepared and published the Final Review-cum-Gradation list of various 'C' Group cadres, and Statewide Head Accountant cadre, for the period Dt: 01.11.1956 to Dt: 31.12.1994 in accordance with the provisions of K.C.S (Regulation of Promotion, Pay and Pension) Act 1973 and Karnataka Service Examination Act 1976 Vide this office O.M Dt: 01.07.1993.

Hon'ble Supreme Court of India in their judgment Dt: 09.02.2017 in Civil Appeal No. 2368 /2011 and 2369/2011 has directed that "The seniority lists of all cadres, in which promotions have been made in accordance with the existing policy of reservation in promotion and the seniority lists of all cadres higher than such cadres shall be reviewed and action shall be taken". In pursuance of the judgment dated : 09.02.2017 of the Hon'ble Supreme Court and strictly in accordance with the directions issued by the Government vide order dated: 06.05.2017 of DPAR seeking to operationalize the judgment , the dates of promotions already accorded from time to time based on consequential seniority have been reviewed and revised as per "Other catch-up rule" duly taking into consideration the respective Government Orders issued from time to time.

2….

Based on the Hon'ble Supreme Court of India's judgment and the directions issued by the Government vide Ref. (2), the department has prepared the revised Provisional Review-cum-Gradation list of 'B' Group, Statewide Head Accountant, from 1978 to 2016 and published in the Directorate of Treasuries website **http://karnatakatreasury.gov.in/** for inviting objections. The Second Division Assistants gradation list is also published for reference.

All the Heads of Offices should publish the provisional list in the "Notice Boards" of every District /Taluk SubTreasury Offices. Objections shall be submitted within Ten days from the date of publication of the provisional lists.

The Review-cum-Gradation Lists are prepared, and the details are recorded on the basis of the documents available in the Directorate of Treasuries. The affected people can file their objections along with relevant documents within the prescribed time to the appointing authority through proper channel. Objections filed beyond prescribed time will not be considered. Typographical errors related objections will be reviewed as per records in references vide (3).

Director of Treasuries,
Bangalore.
27/11/2017

Copy to:

1. Secretary to Government, Finance Department, (Finance & resource) Vidhana Soudha, Bangalore.
2. Secretary to Government, Ex-officio K-II and Treasury Commissioner, Finance Department,
   a. 7th Floor, Kalidasa Marg, Commercial Tax Building, Gandhinagar, Bangalore.

3) ಪಿ.ಎ. ನಿ.ಕ.ಲೆ